ಕೆ.ಹೆಚ್.ಡಿ.ಸಿ

		2000–01	2001–2002	2002–03	ಒಟ್ಟು
	ಆಯವ್ಯಯ ನಿಗದಿ	131.44	100.00	150.00	381.44
	ಬಿಡುಗಡೆ ಮಾಡಿರುವ ಹಣ	131.44	100.00	131.765	363.205
ಕೈಮಗ್ಗ ನೇಕಾರರ ಸಹಕಾರ ಸಂಘಗಳು					
1.	ಬೆಂಗಳೂರು (ನ)	583082	1133970	486724	2786858
2.	ಬೆಳಗಾವಿ	–	712500	1250927	1963427
3.	ಬಳ್ಳಾರಿ	–	141485	415523	557008
4.	ಬೀದರ್	–	243750	318750	562500
5.	ಬಿಜಾಪುರ/ ಬಾಗಲಕೋಟೆ	1971423	2541542	3253024	9706734
6.	ಚಿತ್ರದುರ್ಗ	–	113030	1350236	1463266
7.	ದಕ್ಷಿಣ ಕನ್ನಡ	1223124	1953225	1507183	5906656
8.	ಧಾರವಾಡ	185943	2265183	656680	3293749
9.	ಗುಲ್ಬರ್ಗ	32489	606426	858893	1530297
10.	ಮೈಸೂರು	–	33750	33750	67500
11.	ರಾಯಚೂರು	147689	93081	205810	594269
12.	ಶಿವಮೊಗ್ಗ	–	87500	87500	175000
13.	ಉತ್ತರ ಕನ್ನಡ	–	75000	75000	150000
	ಒಟ್ಟು	**4143750**	**10000442**	**10500000**	**24644192**

ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 18ರ ಹಣದ ವಿನಿಯೋಗದ ಬಗ್ಗೆ

4591 (5335) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ಥಳೀಯ ಸಂಸ್ಥೆಗಳಲ್ಲಿನ ಶೇಕಡಾ 18ರ ಹಣವನ್ನು ವಿನಿಯೋಗಿಸುವಲ್ಲಿ ನಿರ್ದಿಷ್ಟ ಮಾರ್ಗಸೂಚಿಗಳು ಇದ್ದಲ್ಲಿ, ಅದರ ವಿವರಗಳೇನು?

ಆ) ಈ ಹಣದ ಸಮರ್ಪಕ ಬಳಕೆಯಾಗಲು ಸರ್ಕಾರದ ನಿರ್ದಿಷ್ಟ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು, ಮಹನಗರ ಪಾಲಿಕೆ, ನಗರಸಭೆ, ಪುರಸಭೆ ಮುಂತಾದ ಸ್ಥಳೀಯ ಸಂಸ್ಥೆಗಳು ತಮ್ಮ ಆದಾಯದ ಅಂದರೆ ಸಾಲ ಮತ್ತು ನಿರ್ದಿಷ್ಟ ಯೋಜನೆಗಳಿಗೆ ನೀಡುವ ಸಹಾಯಾನುದಾನವನ್ನು ಹೊರತುಪಡಿಸಿದ ಎಲ್ಲಾ ವಾರ್ಷಿಕ ಆದಾಯದಲ್ಲಿ ಶೇ.18ರ ಪ್ರಮಾಣದ ನಿಧಿಯನ್ನು ಪ್ರತ್ಯೇಕವಾಗಿ ಮೀಸಲಿರಿಸಿ ಇದರಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮವನ್ನು

ಅನುಷ್ಠಾನಿಸಲು ರಾಜ್ಯ ಸರ್ಕಾರ ಆದೇಶವನ್ನು ಹೊರಡಿಸಿದೆ. ನಗರಾಭಿವೃದ್ಧಿ ಇಲಾಖೆ ತಮ್ಮ ಇತ್ತೀಚಿನ ಸುತ್ತೋಲೆ ಸಂಖ್ಯೆ: ನಆಇ 119 ಟಿಎಂಎಂ 97, ದಿನಾಂಕ: 22.9.2001ರಲ್ಲಿ ನಿರ್ದಿಷ್ಟ ಮಾರ್ಗಸೂಚಿಯನ್ನು ನೀಡಿದೆ. ಇದರನ್ವಯ ಶೇ. 18ರ ನಿಧಿಯನ್ನು ವಿಶೇಷವಾಗಿ ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸುತ್ತೋಲೆಯಲ್ಲಿ ಪಟ್ಟಿ ಮಾಡಿದ ಕಾರ್ಯಕ್ರಮಗಳ ಪೈಕಿ ಆಯ್ಕೆ ಮಾಡಿ ಸೌಲಭ್ಯಗಳನ್ನು ಒದಗಿಸಬೇಕೆಂದು ಸೂಚಿಸಿರುತ್ತದೆ. ಇದರನ್ವಯ ಕ್ರಿಯಾ ಯೋಜನೆಯನ್ನು ರೂಪಿಸುವಾಗ ಕೆಳಕಂಡ ಪ್ರಮಾಣದಲ್ಲಿ ಶೇ. 18ರ ಹಣವನ್ನು ವಿನಿಯೋಗ ಮಾಡಬೇಕೆಂದು ಸೂಚಿಸಿರುತ್ತಾರೆ:

1. ಶಿಕ್ಷಣಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ. – ಶೇ. 40 ರಷ್ಟು
2. ಆರ್ಥಿಕ ಅಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ – ಶೇ. 40 ರಷ್ಟು
3. ಇತರೆ ಕಾರ್ಯಕ್ರಮಗಳಿಗೆ – ಶೇ. 20 ರಷ್ಟು

ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಲ್ಲಿ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 213, 219 ಮತ್ತು 229 ರಲ್ಲಿ ತಿಳಿಸಿರುವಂತೆ ಕಲ್ಯಾಣ ಚಟುವಟಿಕೆ ಉದ್ದೇಶಿತ ನಿಧಿಯಲ್ಲಿ ಕ್ರಮವಾಗಿ ಶೇ. 25, ಶೇ. 20 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಪರಿಶಿಷ್ಟ ಉಪಯೋಗಿಸತಕ್ಕದ್ದು.

ಆ) ಸರ್ಕಾರದ ವಿವಿಧ ಹಂತದಲ್ಲಿ ಶೇ.18ರ ನಿಧಿ ಬಳಕೆ ಕುರಿತಂತೆ ಪ್ರಗತಿ ಪರಿಶೀಲನೆ ಕೈಗೊಳ್ಳಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಹಾಗೂ ಪೌರಾಡಳಿತ ಇಲಾಖೆಗಳು ಸ್ಥಳೀಯ ಸಂಸ್ಥೆಗಳ ಶೇ. 18ರ ನಿಧಿ ಬಳಕೆ ಕುರಿತಂತೆ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳ ಶೇ.18ರ ನಿಧಿ ಬಳಕೆ ಪ್ರಗತಿಯನ್ನು ಆಧರಿಸಿ ಕುಂಠಿತ ಪ್ರಗತಿ ಇರುವಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ತಿಳುವಳಿಕೆ ಪತ್ರವನ್ನು ಬರೆಯಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಮಹಾನಗರಪಾಲಿಕೆ ಹಾಗೂ ನಗರ ಸಭೆಯಲ್ಲಿ ಶೇ.18ರ ನಿಧಿ ಬಳಕೆ ಕುರಿತಂತೆ ತಪಾಸಣೆ ಕೈಗೊಳ್ಳುವ ಬಗ್ಗೆ ತನಿಖಾ ತಂಡವನ್ನು ರಚಿಸಿದೆ.

ರಾಜ್ಯದಲ್ಲಿನ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿನ ಸೇವಾ ಶುಲ್ಕ

4592 (5336) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಜಾನುವಾರುಗಳ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಸೇವಾಶುಲ್ಕವನ್ನು ವಿಧಿಸಲಾಗುತ್ತಿದೆಯೇ?

ಆ) ಹಾಗೆ ವಿಧಿಸಲಾಗುತ್ತಿರುವ ಸೇವಾ ಶುಲ್ಕದ ವಿವರಗಳೇನೂ: ಸೇವಾ ಶುಲ್ಕ ಸಂಗ್ರಹದ ಉದ್ದೇಶವೇನು?

ಇ) ಸೇವಾ ಶುಲ್ಕ ವಿಧಿಸುವುದಕ್ಕೆ ಸಾರ್ವಜನಿಕರ ಪ್ರತಿರೋದ ವ್ಯಕ್ತವಾಗುತ್ತಾ ಇರುವುದನ್ನು ಸರ್ಕಾರವು ಮನಗಂಡಿದೆಯೇ?

ಈ) ಹಾಗಿದ್ದಲ್ಲಿ ಸೇವಾಶುಲ್ಕವನ್ನು ಹಿಂತೆಗೆದುಕೊಳ್ಳಲು ಪರಿಶೀಲಿಸಲಾಗುವುದೇ